ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿಗಳಿಗೆ ವೀಕ್ಷಿಸಲು ಒದಗಿಸಿರುವ ಸೌಲ್ಯಗಳೇನು; ಮುಂದಿನ ಯೋಜನೆಗಳೇನು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) 1) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಪ್ರವಾಸಿ ಕೇಂದ್ರಗಳನ್ನು 5 ಸರ್ಕ್ಯೂಟಗಳಾಗಿ ವಿಂಗಡಿಸಲಾಗಿದೆ. ಇದಕ್ಕಾಗಿ ರೂ 4460.00 ಕೋಟಿಗಳ ಮಾಸ್ಟರ್ ಪ್ಲಾನನ್ನು ತಯಾರಿಸಿದ್ದು ಇದರಲ್ಲಿ ಖಾಸಗೀ ಬಂಡವಾಳದಾರರಿಂದ ಶೇಕಡ 70ರಷ್ಟು ಹಾಗೂ ಸರ್ಕಾರದ ವತಿಯಿಂದ ಶೇಕಡ 30ರಷ್ಟನ್ನು ತೊಡಗಿಸಲು ನಿರೀಕ್ಷಿಸಲಾಗಿದೆ.

2) ನೂತನ ಪ್ರವಾಸೋದ್ಯಮ ನೀತಿಯನ್ನು 1-6-97 ರಿಂದ ಜಾರಿಗೆ ತರಲಾಗಿದೆ. ಈ ನೀತಿಯ ಅಡಿಯಲ್ಲಿ ಖಾಸಗಿ ಉದ್ದಿಮೆದಾರರಿಗೆ ಪ್ರವಾಸೋದ್ಯಮದಲ್ಲಿ ಬಂಡವಾಳ ಹೊಡಲು ವಿವಿಧ ರೀತಿಯ ರಿಯಾಯಿತಿ ಹಾಗೂ ಸಹಾಯಧನವನ್ನು ಉತ್ತೇಜನವಾಗಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

3) ಹಂಪಿ, ಜೋಗ್ ಮತ್ತು ಕರಾವಳಿ ಪ್ರದೇಶಗಳನ್ನು ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ ಇದರ ಬಗ್ಗೆ ಪ್ರತ್ಯೇಕ ಅಧ್ಯಯನ ವರದಿಗಳನ್ನು ನೀಡಲು ನುರಿತ ಸಂಸ್ಥೆಗಳನ್ನು ನಿಯೋಜಿಸಲಾಗಿದೆ.

4) ಪ್ರಸ್ತುತ ಸಾಲಿನಲ್ಲಿ ರೂ 710.00 ಲಕ್ಷಗಳನ್ನು ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ಆಯವ್ಯಯದಲ್ಲಿ ಒದಗಿಸಲಾಗಿದೆ.

ಆ) 1) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ವತಿಯಿಂದ ವಾರಕ್ಕೊಮ್ಮೆ ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ಸ್ಥಳಗಳಿಗೆ ಐದು ದಿನಗಳ ವ್ಯವಸ್ಥಿತ ಪ್ರವಾಸಗಳನ್ನು ನಡೆಸಲಾಗುತ್ತಿದೆ.

2) ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳದ ಮದನಿ ದರ್ಗಕ್ಕೆ ರೂ 20.00 ಲಕ್ಷ ವೆಚ್ಚದಲ್ಲಿ ಕಾಂಕ್ರೀಟೀಕರಣ ಮತ್ತು ವಿದ್ಯುತ್ತೀಕರಣ ವ್ಯವಸ್ಥೆಗಾಗಿ ಅನುದಾನ ಒದಗಿಸಲಾಗಿದೆ.

**ರಾಜ್ಯದಲ್ಲಿ ಅರಣ್ಯ ಒತ್ತುವರಿ ಮಾಡಿರುವ ಬಗ್ಗೆ**

1336 (1498) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಅರಣ್ಯವನ್ನು ಒತ್ತುವರಿ ಮಾಡಿ ಕೃಷಿ ಮಾಡಿರುವ ಪ್ರದೇಶಗಳ ವಿಸ್ತೀರ್ಣ ಎಷ್ಟು? ಒತ್ತುವರಿ ತೆರವು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಒತ್ತುವರಿ ಮಾಡಿರುವ ಜಾಗಗಳನ್ನು ಒತ್ತುವರಿ ಮಾಡಿದವರಿಗೆ ಬಿಟ್ಟುಕೊಡುವ ಇರಾದೆ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?

ಇ) ಒತ್ತುವರಿ ತೆರವು ಮಾಡುವ ಇರಾದೆ ಸರ್ಕಾರಕ್ಕಿದ್ದರೆ ಎಂದು ಒತ್ತುವರಿಯನ್ನು ತೆರವು ಮಾಡಿಸಲಾಗುವುದು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

**ಅ) ರಾಜ್ಯದಲ್ಲಿ ಒಟ್ಟು 1,09,047 ಹೆ. ಅರಣ್ಯ ಪ್ರದೇಶವನ್ನು ಕೃಷಿ ಹಾಗೂ ಇನ್ನಿತರ ಉದ್ದೇಶಗಳಿಗಾಗಿ ಅತಿಕ್ರಮಣ ಮಾಡಿರುತ್ತಾರೆ. ದಿನಾಂಕ:27.4.78ರ ಪೂರ್ವದ ಅತಿಕ್ರಮಣವನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದ್ದು ರಾಜ್ಯ ಸರ್ಕಾರವೂ ಸಹ ಆದೇಶ ಸಂಖ್ಯೆ:ಅಪಜೀ 5 ಎಫ್‌ಜಿಎಲ್ 90 ದಿನಾಂಕ: 5.5.97ರಲ್ಲಿ ಕೆಲವು ನಿಬಂಧನೆಗೊಳಪಟ್ಟು ಆದೇಶ ಹೊರಡಿಸಿರುತ್ತದೆ. ಹಾಗೂ ದಿನಾಂಕ:27.4.78ರ ಪೂರ್ವದ ಎಲ್ಲಾ ಅನರ್ಹ ಹಾಗೂ ಆ ನಂತರದ ಅತಿಕ್ರಮಣವನ್ನು ತೆರವುಗೊಳಿಸಲೂ ಸಹ ಆದೇಶ ಹೊರಡಿಸಿರುತ್ತದೆ.**

ಆ) ದಿನಾಂಕ:27.4.78ರ ಪೂರ್ವದಲ್ಲಿ ಅರಣ್ಯ ಭೂಮಿಯನ್ನು ಬಡಜನರು ಅತಿಕ್ರಮಿಸಿರುವುದನ್ನು ಸರ್ಕಾರಿ ಆದೇಶ ಸಂಖ್ಯೆ : ಅಪಜೀ 5 ಎಫ್‌ಜಿಎಲ್ 90 ದಿನಾಂಕ: 5.5.97ರಂತೆ ಸಕ್ರಮಗೊಳಿಸಲು ಆದೇಶಿಸಲಾಗಿದೆ. ಅರಣ್ಯ ಮತ್ತು ಕಂದಾಯ ಇಲಾಖೆಗಳ ಭೂಮಿಗಳ ಅತಿಕ್ರಮಣಗಳನ್ನು ಪರಿಶೀಲಿಸಲು ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದ್ದು ವಿಷಯವು ಸಮಿತಿಯ ಪರಿಶೀಲನೆಯಲ್ಲಿದೆ.

ಇ) ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 64(ಎ) ರ ಪ್ರಕಾರ ಎಲ್ಲಾ ಅನರ್ಹ ಅತಿಕ್ರಮಣಗಳನ್ನು ಖಿಲ್ಲಾ ಪಡಿಸಲಾಗುತ್ತಿದೆ. ಮತ್ತು ಈ ಕ್ರಮ ಪ್ರಗತಿಯಲ್ಲಿದೆ.

**ಮೈಸೂರು- ಮಡಕೇರಿ-ಬಂಟ್ವಾಳ ಹೆದ್ದಾರಿಗಳ ದುಸ್ಥಿತಿ**

1337 (1499) ಶ್ರೀ ಸದಾನಂದ ಗೌಡ ಡಿ.ವಿ(ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು -ಮಡಿಕೇರಿ-ಬಂಟ್ವಾಳ ರಾಜ್ಯ ಹೆದ್ದಾರಿಯು ಅತ್ಯಂತ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಈ ರಸ್ತೆಯ ದುರಸ್ತಿಯ ಕೆಲಸವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹಲವೆಡೆ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ವಾರ್ಷಿಕ ನಿರ್ವಹಣೆಯಲ್ಲಿ ಗುಂಡಿ ಮುಚ್ಚಲಾಗಿದೆ. ಹುಡ್ಕೊ ಸಹಾಯದಲ್ಲಿ ಈ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

ಆ) ಈ ರಸ್ತೆ ದುರಸ್ತಿಯನ್ನು ಈ ಸಾಲಿನಲ್ಲಿ (2000-2001ರಲ್ಲಿ) ಕೈಗೆತ್ತಿಕೊಳ್ಳಲಾಗುವುದು.

**ತುಮಕೂರಿನಲ್ಲಿ ಅರಣ್ಯ ಅಭಿವೃದ್ಧಿ**

1338 (763) ಶ್ರೀ ಎಸ್, ಶಿವಣ್ಣ (ತುಮಕೂರು) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

**ಅ) ತುಮಕೂರು ಅರಣ್ಯ ವಲಯದಲ್ಲಿ 1996-97, 1997-98 ಮತ್ತು 1998-99ನೇ ಪಿಟ್ಸ್ ಇನ್ ಪಿಟ್ಸ್ ಮಾದರಿಯಲ್ಲಿ ಸಸಿ ನೆಡಲು ತೆಗೆದ ಗುಂಡಿಗಳ ಸಂಖ್ಯೆ ಎಷ್ಟು?**